## ಇತಿ ಮಿತಿಯೊಳಗೆ ಹಿತವಾಗಿರಲಿ

ಝೀ ಟಿ. ವಿ. ಕನ್ನಡ ವಾಹಿನಿಯಲ್ಲಿ 'ಸರಿಗಮಪ'ದ ನಿರೂಪಕಿ ಅನುಶ್ರೀ ಅವರು ಚೆನ್ನಾಗಿ ನಿರೂಪಣೆ ಮಾಡುತ್ತಿದ್ದರು. ಬರಬರುತ್ತಾ ಹಾಸ್ಯವನ್ನು ಪ್ರಾರಂಭಿಸಿದರು. ಅದು ಅತಿರೇಕವಾಗಿ ಕಾಣುತ್ತಿತ್ತು. ಅದು ಮುಗಿದ ನಂತರ 'ಡ್ಯಾನ್ಸ್ ಕರ್ನಾಟಕ'ಕ್ಕೂ ನಿರೂಪಕಿಯಾಗಿ ಅನುಶ್ರೀ ಬಂದಿದ್ದು ಸ್ವಾಗತಾರ್ಹ. ಆದರೆ ಅಸಹ್ಯ ಉಡುಪು, ಕಿರಿಚಾಟಗಳಿಂದ ಮಿತಿಮೀರಿ ವರ್ತಿಸುವುದನ್ನು ಕಂಡು ಪ್ರೇಕ್ಷಕರಾದ ನಮಗೆ ತುಂಬಾ ಬೇಸರ ತರುತ್ತಿದೆ. ನಮ್ಮ ಸಲಹೆ ಏನೆಂದರೆ ಮೊದಲಿನಂತೆ ಸರಳ ಸುಂದರವಾದ ಭಾರತೀಯ ನಾರಿಯ ಉಡುಪಿನೊಂದಿಗೆ ಹಿತವಾಗುವ ಭಾಷೆ, ಕಿರುನಗೆ ಬೀರುತ್ತಾ, ಪ್ರೇಕ್ಷಕವರ್ಗಕ್ಕೆ ಹಿತಮಿತವಾದ ಮಾತುಗಳಿಂದ ಮನಸ್ಸಿಗೆ ಮುದ ನೀಡಲಿ ಎಂದು ಆಶಿಸುತ್ತೇವೆ.

ಕರ್ನಾಟಕವನ್ನೇ ಆಕರ್ಷಿಸುತ್ತಿರುವ ಮಕ್ಕಳ ಡ್ರಾಮಾದ ನಿರೂಪಕ ಮಾ. ಆನಂದ್ ಹಿತವಾದ ಮಾತಿನಿಂದ ಗೌರವಯುತವಾಗಿ ಸಾಕಷ್ಟು ಪ್ರೇಕ್ಷಕರನ್ನು ತನ್ನ ಕಡೆಗೆ ಸೆಳೆಯುತ್ತಿರುವುದು ಸ್ವಾಗತಾರ್ಹ.

—ಲಲಿತಾ, ಅಂಬಾಗಿಲು, ಭಾಗ್ಯ, ಚರಣ, ಚೈತ್ರ ಉಪ್ಪುಂದ

## ಮೂರ್ಖರ ಪೆಟ್ಟಿಗೆ

ಖಾಸಗಿ ಟಿವಿಗಳಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳು ಈಗ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಿವೆ. ಬರಿ ದ್ವೇಷದ ಕತೆಗಳನ್ನು 2–3 ವರ್ಷಗಳ ಕಾಲ ಎಳೆಯುತ್ತಾ ಇದ್ದಾರೆ ಧಾರಾವಾಹಿ ನಿರ್ದೇಶಕರು. ಇವರಿಗೆ ಬೇರೆ ರೀತಿಯ, ಸಾಮಾಜಿಕ ಕಳಕಳಿಯ, ನೀತಿ, ಸತ್ವಭರಿತ ಕತೆಗಳೇ ಸಿಗುತ್ತಿಲ್ಲವೇ? ಅದರಲ್ಲೂ ಸರ್ಕಾರದ 'ಚಂದನ' ಪರವಾಗಿಲ್ಲ. ಇದರಲ್ಲಿ ಬರುವ ಎಲ್ಲ ಕಾರ್ಯಕ್ರಮಗಳೂ ಸೂಪರ್, ಅದರಲ್ಲೂ ಹಳೆಯ ಚಿತ್ರಗೀತೆಗಳನ್ನು ಮೆಲುಕು ಹಾಕುವ 'ಮಧುರ ಮಧುರವೀ ಮಂಜುಳಗಾನ' ಬಹಳ ಚೆನ್ನಾಗಿದೆ.

— ಕೆ. ಹರೀಶ್ ಕುಮಾರ್, ಮರೀಲ್

## ಕುರಿಯ ಪ್ರತಾಪ

ತೋರಿಸಿದ್ದೇ ತೋರಿಸುವ ಸುದ್ದಿ ಚಾನೆಲ್‌ಗಳಿಂದ ಹಾಗೂ ಹೆಚ್ಚು ಕಡಿಮೆ ಒಂದೇ ತರಹದ ಕಥೆಗಳಿಂದ ಕೂಡಿರುವ ಧಾರಾವಾಹಿಗಳಿಂದ ಬೇಸತ್ತ ಕೆಲವು ವೀಕ್ಷಕ ವರ್ಗದವರಿಗೆ ಸೃಜನ್ ಲೋಕೇಶ್ ಕಲರ್ಸ್ ಕನ್ನಡದಲ್ಲಿ ನಡೆಸಿಕೊಡುತ್ತಿರುವ 'ಮಜಾ ಟಾಕೀಸ್' ಸ್ವಲ್ಪ ಮಟ್ಟಿಗಾದರೂ 'ಮಜಾ' ಕೊಡುವಲ್ಲಿ ಯಶಸ್ವಿಯಾಗಿದೆ. ಮಾತಿನ ಮಲ್ಲ ಸೃಜನ್ ಹಾಗೂ ಆ ತಂಡಕ್ಕೆ ಇತ್ತೀಚೆಗೆ ಕುರಿ ಪ್ರತಾಪ್‌ರವರು ಸೇರಿಕೊಂಡು ಕಾರ್ಯಕ್ರಮ ಮತ್ತಷ್ಟು ಚೆನ್ನಾಗಿ ಮೂಡಿ ಬರುತ್ತಿದೆ.

—ರಾಘವೇಂದ್ರ ಜೋಯ್ಸ್. ವೈ. ಪಿ., ಮೈಸೂರು

## ವಾರದ ಪತ್ರ
## ಕನ್ನಡ ಟಿವಿ ಬೆಳೆಸಿದವರು ಯಾರು?

ತೊಂಬತ್ತರ ದಶಕದಲ್ಲಿ ಕನ್ನಡ ಟಿ.ವಿ. ವಾಹಿನಿಗಳು ಆರಂಭವಾದಾಗ, ಅವು ಹಿಂದಿ ಮತ್ತು ಇನ್ನಿತರ ಭಾಷೆಗಳ ವಾಹಿನಿಗಳ ಭರಾಟೆಯಲ್ಲಿ ಉಳಿಯಬಲ್ಲವೇ ಎಂದು ಸಂದೇಹ ವ್ಯಕ್ತ ಮಾಡಲಾಗಿತ್ತು. ಕಾರ್ಯಕ್ರಮಗಳಿಗೆ ಪ್ರಾಯೋಜಕರಿಲ್ಲದೇ ಕಾರ್ಯಕ್ರಮದ ಪ್ರಶಸ್ತಿ ವಿಜೇತರಿಗೆ ವಾಹಿನಿಯೊಂದು ರೆಡಿಮೇಡ್ ಉಪ್ಪಿಟ್ಟು ಮತ್ತು ವಡಾ ಮಿಕ್ಸರ್‌ನ್ನು ನೀಡಿದಾಗ ಕೆಲವು ಮಾಧ್ಯಮ ವೀಕ್ಷಕರು 'ನಾನು ಹೇಳಿರಲಿಲ್ಲವೇ?' ಎಂದು ಗಹನವಾಗಿ ಹೇಳಿದ್ದರು. ಕನ್ನಡಿಗರ ದುರದೃಷ್ಟವೋ ಅಥವಾ ವಿಶ್ಲೇಷಕರ ಇಚ್ಛೆಯೋ, 'ಕಾವೇರಿ' ಎಂಬ ವಾಹಿನಿ ಹೆಚ್ಚು ಹರಿಯದೇ ನಿಂತಿತು. ಮತ್ತು 'ಸುಪ್ರಭಾತ' ವಾಹಿನಿ ಬೇಗ ಅಸ್ತವಾಯಿತು.

ಎರಡು ದಶಕಗಳ ನಂತರ ಕನ್ನಡ ಟಿ.ವಿ. ವಾಹಿನಿಗಳಿಗೆ ಭವಿಷ್ಯ ಇಲ್ಲವೆಂದು ಭಾಷ್ಯ ಬರೆದವರು ತಮ್ಮ ಅಭಿಪ್ರಾಯವನ್ನು ಹಿಂತೆಗೆದುಕೊಳ್ಳುವಂತೆ, ಕನ್ನಡದಲ್ಲಿ ಈಗ ಸುಮಾರು 30 ಸುದ್ದಿ ವಾಹಿನಿಗಳಿವೆ. ಇನ್ನೂ ಮೂರು ಸುದ್ದಿ ವಾಹಿನಿಗಳು ಸುದ್ದಿ ನೀಡಲು ತಯಾರಿ ನಡೆಸುತ್ತಿವೆಯಂತೆ. ಕಳೆದ ಎರಡು ದಶಕಗಳಲ್ಲಿ ಯಾವುದೇ ವಾಹಿನಿ ಪ್ರಸಾರವನ್ನು ನಿಲ್ಲಿಸಿಲ್ಲ ಮತ್ತು ವಾಹಿನಿಗಳ ಸಂಖ್ಯೆ ಹೆಚ್ಚುತ್ತಿದೆ. ಇದರ ಅರ್ಥ ಕನ್ನಡಿಗರಲ್ಲಿ ಕನ್ನಡೇತರರಂತೆ ಭಾಷಾಭಿಮಾನ ದೊಡ್ಡ ಪ್ರಮಾಣದಲ್ಲಿ ಜಾಗೃತವಾಗುತ್ತಿದೆ. ಮತ್ತು ಅವರು ಕನ್ನಡ ವಾಹಿನಿಗಳನ್ನು ಉಳಿಸಿ, ಪೋಷಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಗ್ರಾಮಾಂತರ ಮತ್ತು ಸಣ್ಣ ಪಟ್ಟಣ,ಗಳ ವೀಕ್ಷಕರು. ಹಲವು ಬಾರಿ ವಾಹಿನಿಗಳ ಭಾಷೆ ಹಳ್ಳಿಗರಿಗೆ ಅರ್ಥವಾಗದ ಬೆಂಗಳೂರಿನ ಕಾಸ್ಮೋಪೊಲಿಟನ್ ಕಂಗ್ಲಿಷ್ ಭಾಷೆಯಾದರೂ, ಹಳ್ಳಿಗರು, ಸಣ್ಣ ಪಟ್ಟಣ ಮತ್ತು ನಗರದವರು ತಮ್ಮ ಭಾಷಾಭಿಮಾನದಿಂದ ಕನ್ನಡ ಟಿ.ವಿ. ವಾಹಿನಿಗಳನ್ನು ಅವರು ತಿಳಿಯದೇ ಮಾಡುವ ತಪ್ಪುಗಳನ್ನು ಹೊಟ್ಟೆಗೆ ಹಾಕಿಕೊಂಡು, ಅವರು ಕೊಟ್ಟದ್ದೇ ಪರಮಾನ್ನವೆಂದು ಸಂತೋಷದಿಂದ ಮತ್ತು ಸಂತೃಪ್ತಿಯಿಂದ ಪೋಷಿಸುತ್ತಿದ್ದಾರೆ.

—ಡಾ.ಅನಿಕೇತ್ ಶರ್ಮಾ, ಬೆಂಗಳೂರು

## ಗಡಿ ರೇಖೆ ಅರಿಯಿರಿ

ದಿನಾಂಕ 17.8.16 ರಂದು ಈಟಿವಿ ಕನ್ನಡ ನ್ಯೂಸ್ ವಾಹಿನಿಯಲ್ಲಿ ಪ್ರಸಾರವಾದ 'ಸರ್ಪ ಶಾಪ' ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ಒಂದಾದ ನಾಗಲಮಡಿಕೆಯು ಆಂಧ್ರ ಪ್ರದೇಶದಲ್ಲಿದೆ ಎಂದು ಹೇಳಿದ್ದಾರೆ. ಅದು ತಪ್ಪು ಮಾಹಿತಿ. ಕರ್ನಾಟಕದ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಹೋಬಳಿಯಿದು. ಪಾವಗಡ ತಾಲ್ಲೂಕು ಆಡಳಿತ ದೃಷ್ಟಿಯಿಂದ ತುಮಕೂರು ಜಿಲ್ಲೆಗೆ ಸೇರಿದ್ದು ಭೌಗೋಳಿಕವಾಗಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿಗೆ ಸಂಪರ್ಕ ಹೊಂದಿದೆ. ಇನ್ನುಳಿದಂತೆ ಆಂಧ್ರ ಪ್ರದೇಶದಿಂದ ಸುತ್ತುವರೆದಿದ್ದು ಬಹುತೇಕ ಜನತೆ ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಬಹುಶಃ ಗುರೂಜಿಯವರು ಇದನ್ನು ಗಮನಿಸಿ ಆಂಧ್ರ ಪ್ರದೇಶಕ್ಕೆ ಸೇರಿದ್ದು ಎಂದು ಹೇಳಿರಬಹುದು.

—ಕೆ. ಎನ್. ಪ್ರಭಾಕರಗುಪ್ತ, ಹಾಸನ

## ಅಪಹಾಸ್ಯ ತಪ್ಪು

'ಝೀ'ನ 'ಡ್ರಾಮಾ ಜೂನಿಯರ್ಸ್'ನಲ್ಲಿ ಮಕ್ಕಳ ಅದ್ಭುತ ಪ್ರತಿಭೆಯ ಅನಾವರಣವಾಗುತ್ತಿದೆ. ಈಗ ಅಂತಿಮ ಹಂತಕ್ಕೂ ಬರುತ್ತಿದೆ. ಇದೇ ಶನಿವಾರ ಆಗಸ್ಟ್ 13 ರಂದು ಬಳಸಿಕೊಂಡ ಸನ್ನಿವೇಶ ಬೇಸರ ತರಿಸಿತು.

'ಅಂಗವಿಕಲತೆ'ಯನ್ನು ಹಾಸ್ಯಕ್ಕೆ ಬಳಸಿಕೊಂಡಿದ್ದು ಎಷ್ಟು ಸರಿ? 'ಕುಂಟ – ಕುರುಡ – ಕೆಪ್ಪ' ಪದಗಳನ್ನು ಬಳಸಿದ್ದು ಅಪಹಾಸ್ಯದಂತಿತ್ತು. ಹಾಸ್ಯಕ್ಕೆ ಬೇಕಾದಷ್ಟು ಸಂಗತಿಗಳು, ವಿಷಯಗಳೂ ಇವೆ. 'ಅಂಗವಿಕಲತೆ' ಅನ್ನುವುದನ್ನು ಧನಾತ್ಮಕವಾಗಿ ಬಳಸಿಕೊಳ್ಳಬೇಕೆ ವಿನಃ ಋಣಾತ್ಮಕವಾಗಿ ಖಂಡಿತ ಅಲ್ಲ. ಪೂರ್ವ ನಿಯೋಜಿತ/ ತಾಲೀಮು ನಡೆಸಿ ಹಮ್ಮಿಕೊಳ್ಳುವ ಈ ಕಾರ್ಯಕ್ರಮಕ್ಕೆ ಇದೊಂದು 'ಕಪ್ಪು ಚುಕ್ಕೆ' ಅನಿಸಿತು.

—ರೂಪ ಗರತಿಕೆರೆ, ಹೊಸನಗರ

## ಒಳ್ಳೆ ಕಥೆ ಇರಲಿ

ಎಲ್ಲ ಧಾರಾವಾಹಿಗಳಲ್ಲೂ ದ್ವೇಷ, ಹಗೆತನ, ಸೇಡು ತೀರಿಸಿಕೊಳ್ಳಲು ಸುಪಾರಿ, ರೌಡಿಗಳು, ಮಂತ್ರ, ಮಾಟ, ವಿಷಜಂತುಗಳು, ದೆವ್ವ ಮತ್ತು ಅತಿಮಾನುಷ ಶಕ್ತಿಗಳ ಮೊರೆಹೋಗಿದ್ದಾರೆ. ಅಸಂಬದ್ಧ ತಿರುವುಗಳನ್ನು ಕೊಟ್ಟೂ ಆಗಿದೆ. ಆದರೂ ಈ ಧಾರಾವಾಹಿಗಳಿಗೆ ಅಂತ್ಯ ಸಿಗುತ್ತಲೇ ಇಲ್ಲ. ಒಳ್ಳೆಯ ಕಥೆ, ಉದ್ದೇಶ, ಸಂದೇಶ ಇರುವ ನಮ್ಮ ಸಾಹಿತ್ಯದ ಕಡೆ ನೋಡಿ ಹೊಸ ಧಾರಾವಾಹಿಗಳನ್ನು ಕೊಡಿ.

ಶ್ರೀನಾಥ್ ಕೊನೇಟಿ, ಬೆಂಗಳೂರು

## ಚಂದನಕ್ಕೆ ಅಭಿನಂದನೆ

ಸ್ಮರಣಾಂಜಲಿ ಮರು ಪ್ರಸಾರ ಮಾಡುತ್ತಿರುವುದು ಅಭಿನಂದನೀಯ. ಈ ಯೋಧರು, ಪೋಲೀಸರು ದೇಶ ರಕ್ಷಣೆಗಾಗಿ, ಶಾಂತಿ ಪಾಲನೆಗಾಗಿ ಮುನ್ನುಗ್ಗಿ ಸಾವನ್ನು ಅಪ್ಪಿದವರು. ಇವರ ಬಲಿದಾನವೇ ನಮಗೆ ಬದುಕು ನೀಡಿದೆ. ಇವರೆಲ್ಲರೂ ಪ್ರಾತಃಸ್ಮರಣೀಯರು. ಡಿಡಿ ಚಂದನದ ಈ ಮರು ಪ್ರಸಾರವು ದೇಶ ರಕ್ಷಣೆಗಾಗಿ ಎಂತಹ ತ್ಯಾಗಕ್ಕೂ ಸಿದ್ಧ ಎಂಬ ಸಂಕಲ್ಪ ದೃಢತೆಯನ್ನು ಯುವಜನಾಂಗದಲ್ಲಿ ಬಿತ್ತಲು ಒಂದು ಸ್ಫೂರ್ತಿ.

—ಸತ್ಯಬೋಧ, ಬೆಂಗಳೂರು